**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 5798/2023 ಸಿ.ಡಬ್ಲೂ.1 ಪಿ.ಡಬ್ಲೂ.1

| | |
|---|---|
| ಹೆಸರು | ಶಿವರಾಜಕುಮಾರ |
| ತಂದೆ/ಗಂಡ | ಮಲ್ಲಿಕಾರ್ಜುನ |
| ವಯಸ್ಸು | 42 ವರ್ಷ |
| ಉದ್ಯೋಗ | ಆಹಾರ ಶಿರಸ್ತೇದಾರರು |
| ವಾಸಸ್ಥಳ | ಸೇಡಂ |

ದಿನಾಂಕ 22-11-2025
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು 2022 ರಿಂದ ಸೇಪ್ಟಂಬರ 2025 ರವರೆಗೆ ಆಳಂದದಲ್ಲಿ ಆಹಾರ ಶಿರಸ್ತೇದಾರರು ಅಂತಾ ಕೆಲಸ ಮಾಡಿರುತ್ತೇನೆ.

ದಿಃ 06-07-2023 ರಂದು ಸಾ. 4.00 ಗಂಟೆಯ ಹೊತ್ತಿಗೆ ಉಪನಿರ್ದೇಶಕರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಕಲಬುರಗಿಯವರು ಕರೆ ಮಾಡಿ, ಹಳ್ಳಿ ಸಲಗರ ಗ್ರಾಮದಲ್ಲಿ ಉರ್ದು ಶಾಲೆಯ ಹತ್ತಿರ ಒಂದು ಶೆಡ್ಡನಲ್ಲಿ ಅಕ್ರಮವಾಗಿ ಅಕ್ಕಿಯನ್ನು ದಾಸ್ತಾನು ಮಾಡಿರುತ್ತಾರೆ ಅದುನ್ನು ಪರಿಶೀಲನೆ ಮಾಡಿ ಅಂತಾ ಆದೇಶ ಮಾಡಿದ ಮೇರೆಗೆ ನಾನು ಮತ್ತು ನಮ್ಮ ಸಿಬ್ಬಂದಿಯಾದ ಚಾಸಾ 6 ರವರು ಶಾಲೆಯ ಹತ್ತಿರ ಹೋಗಿ ಪರಿಶೀಲನೆ ಮಾಡಿದಾಗ ಒಂದು ಶೆಡ್ಡನಲ್ಲಿ ಪ್ಲಾಸ್ಟಿಕ ಚೀಲದಲ್ಲಿ ಅಕ್ಕಿಯನ್ನು ಶೇಖರಣೆ ಮಾಡಿ ಇಟ್ಟಿದ್ದರು. ಸದರಿ ಅಕ್ಕಿಯನ್ನು ಪರಿಶೀಲನೆ ಮಾಡಿದಾಗ ಅದು ಸಾರ್ವಜನಿಕರಿಗೆ ವಿತರಣೆ ಮಾಡುವ ಅಕ್ಕಿ ಅಂತಾ ಕಂಡು ಬಂದಿರುತ್ತದೆ. ನಂತರ ಚಾಸಾ 2 ಮತ್ತು 3 ರವರನ್ನು ಪಂಚರನ್ನಾಗಿ ಕರೆಯಿಸಿ ಅವರ ಸಮಕ್ಷಮದಲ್ಲಿ ಪರಿಶೀಲನೆ ಮಾಡಿದಾಗ 21 ಪ್ಲಾಸ್ಟಿಕ ಚೀಲದಲ್ಲಿ ಅಕ್ಕಿ ಇತ್ತು, ಅದನ್ನು ಟೇಂಡರ ವಾಹನದಲ್ಲಿ ಹಾಕಿ ಟಾಟಾ ವೇ ಬ್ರೀಜ್‌ನಲ್ಲಿ ತೂಕ ಮಾಡಿಸಿದಾಗ, ವಾಹನ ಮತ್ತು ಅಕ್ಕಿ ತೂಕ ಒಟ್ಟು 6075 ಕೆ.ಜಿ ಇತ್ತು. ಸದರಿ ಅಕ್ಕಿಯನ್ನು ಸಗಟು ಮಳಿಗೆಯಲ್ಲಿ ಶೇಖರಣೆ ಮಾಡಿರುತ್ತೇವೆ. ಖಾಲಿ ವಾಹನವನ್ನು ತೂಕ ಮಾಡಿದಾಗ ಅದು 5035 ಕೆ.ಜಿ ತೂಕ ಇತ್ತು, ಒಟ್ಟು ಅಕ್ಕಿ 1040 ಕೆ.ಜಿ ಇತ್ತು, ಪ್ರತಿ ಕೆ.ಜಿಗೆ ರೂ. 25/- ಅಂತೆ ಒಟ್ಟು ರೂ. 26,000/- ಕಿಮ್ಮತ್ತು ಇತ್ತು. ನಂತರ ಜಪ್ತಿ ಪಂಚನಾಮೆಯನ್ನು ಪೂರ್ಣಗೊಳಿಸಿ ಸದರಿ ಅಕ್ಕಿಯಿಂದ ಒಂದೊಂದು ಕೆ.ಜಿಯಂತೆ ಎರಡು ಪ್ಯಾಕೇಟಗಳಲ್ಲಿ ಸ್ಯಾಂಪಲಗಾಗಿ ತೆಗೆದುಕೊಂಡು ನಾನು ಮತ್ತು ಪಂಚರು ಸಹಿ ಮಾಡಿದ ಚೀಟಿ ಅಂಟಿಸಿ ಎಸ್ ಮತ್ತು ಬಿ ಅಂತಾ ಮಾದರಿ ಮುದ್ರೆ ನಮೂದಿಸಿರುತ್ತೇವೆ, ನಂತರ ಅಕ್ಕಿ ಸಿಕ್ಕ ಜಾಗದ ಮಾಲೀಕರ ವಿರುದ್ದ ದೂರನ್ನು ದಾಖಲಿಸಿರುತ್ತೇನೆ.

ಸಾಕ್ಷಿಯು ಎರಡು ಚಿಕ್ಕ ಅಕ್ಕಿ ಚೀಲಗಳನ್ನು ನೋಡಿ ಗುರುತಿಸಿದ ಕಾರಣ ಅವುಗಳನ್ನು ಕ್ರಮವಾಗಿ ಮು.ಮಾ.1 ಮತ್ತು 2 ಅಂತಾ ಗುರುತಿಸಲಾಯಿತು. ಸಾಕ್ಷಿಯು ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1 (ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ದೂರಿನ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 2 ಎ ಅಂತಾ ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು. )**

<u>ಪಾಟೀ ಸವಾಲುಃ ಮಾನ್ಯ ಸ ಸ ಅ ವಕೀಲರಿಂದ:</u>

ದಿಃ 09-07-2023 ರಂದು ಹಣಮಂತ ತಂದೆ ಸಾತಪ್ಪಾ ಪೂಜಾರಿ ಆತನು ತನ್ನ ಹೇಸರಿನಲ್ಲಿ ಸರ್ವೆ ನಂಬರ 96/2 ಅಂತಾ ಪ್ಲಾಟ ಹಾಕಿದ್ದು ರಸುಲಸಾಬ ತಂದೆ ಇಮಾಮಸಾಬ ಎನ್ನುವವರು ಪ್ಲಾಟನ್ನು ಖರೀದಿ ಮಾಡಿದ್ದು, ಸದರಿ ರಸುಲಸಾಬರವರು ಆರೋಪಿಗೆ ಸದರಿ ಪ್ಲಾಟನ್ನು ಬಾಡಿಗೆಗೆ ನೀಡಿದ್ದರು ಎಂದರೆ ಸರಿ. ನಾನು ಈ ರೀತಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಎಮ್. ಎಸ್. ಎಚ್. ವಕೀಲರಿಂದ:</u>

ಬಾತ್ಮಿ ಬಂದಾಗ ನಾನು ಕಚೇರಿಯಲ್ಲಿ ಇದ್ದೇನು. ಆ ದಿನ ನಾನು ಸ್ಥಳ ಪರಿಶೀಲನೆಗೆ ಹೋಗುವಾಗ ಕಚೇರಿಯ ದಿನಚರಿಯಲ್ಲಿ ನಮೂದು ಮಾಡಿರಲಿಲ್ಲ ಆದರೆ ತಹಶೀಲ್ದಾರವರಿಗೆ ಮೌಖಿಕವಾಗಿ ತಿಳಿಸಿ ಹೋಗಿರುತ್ತೇನೆ ಅಂತಾ ನುಡಿಯುತ್ತಾರೆ. ತಹಶೀಲ್ದಾರವರು ನನಗೆ ಲಿಖಿತ ಅನುಮತಿ ನೀಡಿರುವುದಿಲ್ಲ. ನಾನು ಮತ್ತು ಚಾಸಾ 6 ರವರು ಘಟನಾ ಸ್ಥಳಕ್ಕೆ ದ್ವಿಚಕ್ರ ವಾಹನದ ಮೇಲೆ ಹೋಗಿರುತ್ತೇವೆ. ಸ್ಥಳದಲ್ಲಿ ಅಕ್ಕಪಕ್ಕದಲ್ಲಿ ಇರುವ 3-4 ಜನರು ಇದ್ದರು, ಅವರ ಹೆಸರು ನನಗೆ ಗೊತ್ತಿಲ್ಲ. ನಾನು ಸ್ಥಳ ಕ್ಕೆ ಹೋದಾಗ ಅಲ್ಲಿ ಬೀಗ ಹಾಕಿತ್ತು. ಸದರಿ ಜಾಗವು ಖಾಸಗಿ ಸ್ಥಳವಾಗಿದ್ದರಿಂದ ಬೀಗವನ್ನು ತೆಗೆಯಲು ನ್ಯಾಯಾಲಯದಿಂದ ಅಥವಾ ಮೇಲಾಧಿಕಾರಿಗಳಿಂದ ಪರವಾನಿಗೆಯನ್ನು ಪಡೆದಿದ್ದಿರಾ ಎಂದರೆ ಸಾಕ್ಷಿಯು ಪರವಾನಿಗೆ ಪಡೆದಿಲ್ಲ ಆದರೆ ಪೋಲಿಸರು ಅಲ್ಲಿ ಹಾಜರು ಇದ್ದರು ಅಂತಾ ನುಡಿಯುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗುವಾಗ ಇಬ್ಬರು ಹೋಗಿದ್ದೇವು ಅಂತಾ ಹೇಳಿದ್ದು, ಈಗ ಪೋಲಿಸರು ಸಹ ಸ್ಥಳದಲ್ಲಿ ಹಾಜರು ಇದ್ದರು ಅಂತಾ ಹೇಳುತ್ತಿದ್ದು, ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಒಡೆದ ಬೀಗವನ್ನು ಜಪ್ತಿ ಪಡಿಸಿಕೊಂಡು ನ್ಯಾಯಾಲಯದ ಮುಂದೆ ಹಾಜರು ಮಾಡಿರುವುದಿಲ್ಲ. ನಾವು ಬೀಗ ತೆಗೆದು ನೋಡಿದಾಗ ಪ್ಲಾಸ್ಟಿಕ ಚೀಲದಲ್ಲಿ ಅಕ್ಕಿ ಇತ್ತು. ಸದರಿ ಅಕ್ಕಿಯು ಯಾವ ಯಾವ ಬಣ್ಣದ ಚೀಲದಲ್ಲಿ ಇತ್ತು ಅಂತಾ ಹೇಳಲು ಬರುವುದಿಲ್ಲ.

2. ನಾನು ಮೊದಲು ಪ್ರ.ದ.ಸಹಾಯಕ ಅಂತಾ ನೇಮಕಗೊಂಡಿದ್ದೇನು. ನಾನು ಬಿ.ಎ. ಪದವಿದರ ಇರುತ್ತೇನೆ. ನಾನು ದವಸ-ಧಾನ್ಯಗಳ ಪರೀಕ್ಷೆಯ ಪರಿಣಿತಿಯನ್ನು ಹೊಂದಿಲ್ಲ ಎಂದರೆ ಸರಿ. ಸರ್ಕಾರದಿಂದ ಸರಬರಾಜು ಆಗುವ ಅಕ್ಕಿಯನ್ನು ಸರ್ಕಾರವು ರೈತರಿಂದಲೇ ಖರೀದಿ ಮಾಡುತ್ತದೆ ಎಂದರೆ ಸರಿ. ಸದರಿ ಅಕ್ಕಿ ಸರ್ಕಾರದಿಂದ ಸರಬರಾಜು ಆದ ಅಕ್ಕಿ ಅಂತಾ

ಗುರುತಿಸಲು ಅದಕ್ಕೆ ಯಾವುದಾದರು ರಾಸಾಯನಿಕವನ್ನು ಸೇರಿಸಿರುತ್ತೀರಾ ಎಂದರೆ ಸಾಕ್ಷಿಯು ನ್ಯೂಟ್ರೀಷನ್ ಇರುವ ಅಕ್ಕಿಯನ್ನು ಅದರಲ್ಲಿ ಸೇರಿಸಿರುತ್ತೇವೆ ಅಂತಾ ನುಡಿಯುತ್ತಾರೆ. ಸದರಿ ಅಕ್ಕಿಯು ಸರ್ಕಾರದಿಂದ ಸರಬರಾಜು ಆದ ಅಕ್ಕಿ ಅಂತಾ ತೋರಿಸಲು ರಾಸಾಯನಿಕ ವರದಿಯನ್ನು ಪಡೆದುಕೊಂಡಿರುವುದಿಲ್ಲ. ನಾನು ದವಸಧಾನ್ಯಗಳ ಪರೀಕ್ಷೆಯ ಪರಿಣಿತಿಯನ್ನು ಹೊಂದರೆ ಇದ್ದರೂ ಅಂಕಿ ಸಂಖ್ಯೆಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 21 ಅಕ್ಕಿ ಚೀಲಗಳಲ್ಲಿ ಪ್ರತಿಯೊಂದು ಚೀಲದಲ್ಲಿ ಎಷ್ಟು ಕೆ.ಜಿ ಅಕ್ಕಿ ಇತ್ತು ಅಂತಾ ತೂಕ ಮಾಡಿಲ್ಲ ಆದರೆ ಒಟ್ಟು ಅಕ್ಕಿ ಸೇರಿಸಿ ತೂಕ ಮಾಡಿರುತ್ತೇವೆ. ನಾನು ದೂರಿನಲ್ಲಿ ಜೊಪಡಪಟ್ಟಿ ಅಂತಾ ಹೇಳಿದ್ದು, ಮುಖ್ಯ ವಿಚಾರಣೆ ಯಲ್ಲಿ ಟಿನ್ ಶೆಡ್ಡ ಅಂತಾ ಹೇಳಿದ್ದು ಎರಡು ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ಸದರಿ ಶೆಡ್ಡು ಮೇಲೆ ಟೀನ್ ಇತ್ತು ಮತ್ತು ಕಟ್ಟಿಗೆಯಿಂದ ಮಾಡಿದ್ದು ಇತ್ತು ಅಂತಾ ನುಡಿಯುತ್ತಾರೆ. ನಾನು ಯಾವುದೇ ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಮು.ಮಾಲನ್ನು ಜಪ್ತಿ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಸಿಬ್ಬಂದಿ ಚಾಸಾ 2 ಮತ್ತು 3 ರವರು ಅಂದಾಜು 5.00 ಗಂಟೆಗೆ ಬಂದಿರುತ್ತಾರೆ.ಈ ಪ್ರಕರಣಕ್ಕೆ ಅನುಕೂಲವಾಗಲೀ ಅಂತಾ ಅವರನ್ನು ಸಾಕ್ಷಿದಾರರನ್ನಾಗಿ ಕರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದಾಗ ನನ್ನ ಜೊತೆ ಒಂದು ಡೈರಿ ಮತ್ತು ಪೇನನ್ನು ತೆಗೆದುಕೊಂಡು ಹೋಗಿದ್ದೆ. ಪಂಚನಾಮೆಯನ್ನು ಕಚೇರಿಗೆ ಬಂದು ಟೈಪ್ ಮಾಡಿಸಿ ಸಹಿ ಪಡೆದಿರುತ್ತೇನೆ. ಪಂಚನಾಮೆಯ ಸ್ಥಳವನ್ನು ಹಳ್ಳಿಸಲಗರ ಗ್ರಾಮ ಅಂತಾ ನಮೂದು ಮಾಡಿರುತ್ತೇನೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗದ ಕಾರಣ ವ್ಯತ್ತಿರಿಕ್ತವಾಗಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಚೇರಿಯಲ್ಲಿ ಪ್ರೀಂಟ್ ತೆಗೆದುಕೊಂಡು ಸಹಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ಚೀಲಗಳಿಂದ ಸ್ವಲ್ಪ-ಸ್ವಲ್ಪ ಅಕ್ಕಿಯನ್ನು ತೆಗೆದುಕೊಂಡಿರುತ್ತೇವೆ. ಪಂಚನಾಮೆಯನ್ನು ನಮ್ಮ ಕಚೇರಿಯ ಆಪರೇಟರ್ ಚಾಸಾ 2 ರವರು ಟೈಪ ಮಾಡಿರುತ್ತಾರೆ. ನಿಪಿ. 2 ನ್ನು ಪೋಲಿಸ್ ಠಾಣೆಯಲ್ಲಿ ನಾನು ಮಾಡಿರುತ್ತೇನೆ. ದೂರನ್ನು ದಾಖಲಿಸಿದ ನಂತರ 9 ನೇ ತಾರೀಖಿನಂದು ಪೋಲಿಸ್ ಠಾಣೆಗೆ ಹೋಗಿ ಮರು ಹೇಳಿಕೆಯನ್ನು ನೀಡಿರುತ್ತೇನೆ. ನಾನು ಮರುಹೇಳಿಕೆಯನ್ನು ನೀಡುವ ಸಮಯದಲ್ಲಿ ಖರೀದಿ ಪತ್ರವನ್ನು ನೀಡಿರುವುದಿಲ್ಲ, ಸಾಕ್ಷಿಯ ಮುಂದುವರೆದು ಯಾವುದೇ ದಾಖಲೆಗಳು ಸಿಗಲಿಲ್ಲ ಅಂತಾ ನುಡಿಯುತ್ತಾರೆ. ಯಾವುದೇ ದಾಖಲೆ ಇಲ್ಲದೇ ನಾನು ಈ ಪ್ರಕರಣಕ್ಕೆ ಅನುಕೂಲವಾಗಲೀ ಎಂದು ಸುಳ್ಳು ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ದಿಕ್ಕುಗಳನ್ನು ನಮಾದಿಸಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗದ ಕಾರಣ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಟೇಂಡರ ವಾಹನದ ಚಾಲಕನ ಹೆಸರು ನೆನಪು ಇಲ್ಲ. ಆ ದಿನ ಯಾವುದೇ ಅಕ್ಕಿಯನ್ನು ಜಪ್ತಿ ಪಡಿಸಿದ ಕಾರಣ ಯಾವುದೇ ವಾಹನ ಬಂದಿರುವುದಿಲ್ಲ ಅದಕ್ಕೆ ವಾಹನ ಚಾಲಕನ ಹೆಸರು ನೆನಪು ಇಲ್ಲ ಎಂದರೆ ಸರಿಯಲ್ಲ. ಸದರಿ ಅಕ್ಕಿಯನ್ನು ಎಷ್ಟು ಗಂಟೆಗೆ ತೂಕ ಮಾಡಿಸಿರುತ್ತೇವೆ ಅಂತಾ ನೆನಪು ಇಲ್ಲ. ನಾನು ಸುಳ್ಳು ರಶೀದಿಯನ್ನು ಹಾಜರುಪಡಿಸಿದ ಕಾರಣ ನನಗೆ ಸಮಯ ನೆನಪು ಇಲ್ಲ ಅಂತಾ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗೋದಾಮಿಗೆ 7.00 ಗಂಟೆಗೆ ತಂದು ಜಮಾ ಮಾಡಿರುತ್ತೇನೆ. ಗೋದಾಮುಗಳ ಕಚೇರಿಯ ಕೆಲಸದ ಸಮಯ ಮುಗಿದ ನಂತರ ದಾಸ್ತಾನನ್ನು

ಶೇಖರಿಸಬೇಕಾದರೆ ಮೇಲಾಧಿಕಾರಿಗಳ ಪರವಾನಿಗೆ ಪಡೆಯಬೇಕು ಎಂದರೆ ಸರಿಯಲ್ಲ. ಸಾಕ್ಷಿಯು ಗೋದಾಮುಗಳಿಗೆ ಸಮಯ ನಿಗದಿ ಇರುವುದಿಲ್ಲ. ಸದರಿ ಗೋದಾಮಿಗೆ ಸಿ.ಸಿ.ಟಿ.ವಿ. ಇರುವುದಿಲ್ಲ. ಸದರಿ ಗೋದಾಮು ಬಸ್ಸ ನಿಲ್ದಾಣದ ಹತ್ತಿರ ಇತ್ತು. ಸದರಿ ಗೋದಾಮಿನ ಸುತ್ತಮುತ್ತಲು ಸಿ.ಸಿ.ಟಿ.ಟಿ. ಇದ್ದು, ನಿಜಾಂಶ ಹೊರಬರುತ್ತದೇ ಅಂತಾ ಇಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿರುತ್ತಾರೆ, ಆಲಿಸಿ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ